1569 (2320) ಶ್ರೀ ಬೋಪಯ್ಯ ಕೆ ಜಿ (ಮಡಿಕೇರಿ) – ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಕುಶಾಲನಗರದಲ್ಲಿರುವ ಪಾಲಿಟೆಕ್ನಿಕ್ ಅನ್ನು ಜಿಲ್ಲೆಯಿಂದ ಸ್ಥಳಾಂತರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ಪಾಲಿಟೆಕ್ನಿಕ್ ಅನ್ನು ಮಡಕೇರಿಯಲ್ಲಿ ಸ್ಥಾಪಿಸಲಾಗುವುದೇ,

ಇ) ಹಾಗಿದ್ದಲ್ಲಿ, ಮಡಕೇರಿಯಲ್ಲಿರುವ ಐ ಟಿ ಐ ಕಾಲೇಜಿನಲ್ಲಿಯೇ ಎಲ್ಲಾ ಅನುಕೂಲತೆಗಳಿರುವುದರಿಂದ ಈ ಪಾಲಿಟೆಕ್ನಿಕ್ ಅನ್ನು ಈ ವರ್ಷವೇ ಪ್ರಾರಂಭಿಸಲಾಗುವುದೇ?

ಶ್ರೀ ಡಿ ಹೆಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಎ ಐ ಸಿ ಟಿ ಇ ನವದೆಹಲಿ ಇವರ ನಿಯಮಾವಳಿ ಅನುಸಾರ ಐ ಟಿ ಐ ಕಾಲೇಜನ್ನು ಪಾಲಿಟೆಕ್ನಿಕ್ ಆಗಿ ಪರಿವರ್ತಿಸಲು ಸಾಧ್ಯವಿರುವುದಿಲ್ಲ ಮುಂದಿನ ಆರ್ಥಿಕ ವರ್ಷದಲ್ಲಿನ ಆಯವ್ಯಯವನ್ನು ಗಮನದಲ್ಲಿಟ್ಟುಕೊಂಡು ಮಡಕೇರಿಯಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸಲು ಪರಿಶೀಲಿಸಲಾಗುವುದು

1570 (1970) ಶ್ರೀ ಎನ್ ಎಸ್ ಬೋಸರಾಜು (ಮಾನ್ವಿ) – ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂದವಾಡಗಿ ಏತ ನೀರಾವರಿ ಯೋಜನೆಯ ಸರ್ವೆ ಕಾರ್ಯ ಪ್ರಾರಂಭವಾಗಿದೆಯೇ,

ಆ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು,

ಇ) ಯಾವಾಗ ಪ್ರಾರಂಭಿಸಲಾಗುವುದು?

3/36

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಸರ್ವೆ ಕಾರ್ಯ ಪ್ರಾರಂಭವಾಗಿರುವುದಿಲ್ಲ

ಆ) ಮತ್ತು ಇ) ನಂದವಾಡಗಿ ಏತ ನೀರಾವರಿ ಯೋಜನೆಯು ಸ್ಕೀಮ್ –ಎ ಅಥವಾ ಸ್ಕೀಮ್ –ಬಿ ಅಡಿ ಮಾಸ್ಟರ್ ಪ್ಲಾನ್ ನಿರ್ಧರಿಸುವ ಯೋಜನೆಗಳಲ್ಲಿ ಸೇರಿರುವುದಿಲ್ಲ ಆದುದರಿಂದ ಸದರಿ ಯೋಜನೆಗೆ ಯಾವುದೇ ನಿರ್ದಿಷ್ಟ ನೀರಿನ ಹಂಚಿಕೆ ಆಗಿರುವುದಿಲ್ಲ ಮುಂದುವರೆದು, ಕೃಷ್ಣಾ ನ್ಯಾಯಾಧೀಕರಣದ ಅಂತಿಮ ತೀರ್ಪು ಬಂದ ನಂತರ ರಾಜ್ಯಕ್ಕೆ ಲಭ್ಯವಾಗುವ ಒಟ್ಟು ನೀರಿನ ಹಂಚಿಕೆಯ ಆಧಾರದ ಮೇಲೆ ಅಂತಿಮ ನಿರ್ಣಯವನ್ನು ಅವಲಂಬಿಸಿದೆ

ಬೇಡಿಕೆ ಬಂದಿರುವ ಇತರ ಯೋಜನೆಗಳೊಂದಿಗೆ ಈ ಯೋಜನೆಯನ್ನೂ ಸೇರಿಸಿಕೊಂಡು ಯೋಜನಾ ವರದಿಯನ್ನು ತಯಾರಿಸಿ ಇಟ್ಟುಕೊಳ್ಳಲು (shelf of Projects) ಸೂಚನೆ ನೀಡಲಾಗುವುದು

1571 (1971) ಶ್ರೀ ಬೋಸರಾಜು ಎನ್ ಎಸ್ (ಮಾನ್ವಿ) – ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾರಾಯಣಪುರ ರೈಟ್ ಬ್ಯಾಂಕ್ 9ಎ ಕೆನಾಲ್ ಮಂಜೂರಾತಿಯಾಗಿದೆಯೇ,

ಆ) ಹಾಗಿದ್ದರೆ, ಕೆಲಸ ಯಾವಾಗ ಪ್ರಾರಂಭಿಸಲಾಗುವುದು,

ಇ) ನಾರಾಯಣಪುರ ಬಲದಂಡೆ ಕಾಲುವೆ–ಗಣೇಕಲ್ (ಬ್ಯಾಲೆನ್ಸಿಂಗ್ ರಿಸರ್‌ವಾಯರ್) ಲಿಂಕ್ ಕೆನಾಲ್ ನಿರ್ಮಿಸುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಮತ್ತು ಆ) ಸದರಿ ಕಾಮಗಾರಿಯ ಪ್ರಸ್ತಾವನೆ ಹಾಗೂ ಅಂದಾಜು ಪಟ್ಟಿಯನ್ನು ಕೃಷ್ಣಾ ಭಾಗ್ಯ ಜಲ ನಿಗಮದ ತಾಂತ್ರಿಕ ಉಪ ಸಮಿತಿ ಸಭೆಯಲ್ಲಿ ಪರಿಶೀಲಿಸಲಾಗಿದ್ದು, ತಾತ್ವಿಕ ಒಪ್ಪಿಗೆ ನೀಡಲಾಗಿದೆ ಲಭ್ಯವಾಗುವ ನೀರಿನ ಪ್ರಮಾಣವನ್ನು ಆಧರಿಸಿ, ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದರ ಕುರಿತು ನಿರ್ಧರಿಸಲಾಗುವುದು